ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ ⋆ ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 17.03.2016

## ಪ್ರಕಟಣೆ ಕೃಪೆಗಾಗಿ

## ಸುಸ್ಥಿರ ಕೃಷಿ ಸಾಧನೆಗೆ ತಂತ್ರಜ್ಞಾನದ ಬಳಕೆ ಮತ್ತು ರಾಜಕೀಯ ಇಚ್ಛಾಶಕ್ತಿ ಅವಶ್ಯ

\- ಡಾ ಸಿ ಎಲ್ ಎಲ್ ಗೌಡ

ಮೈಸೂರು ನಗರದ ಬಿ ಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥಾಪಕರಾದ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜನ್ಮ ಶತಮಾನೋತ್ಸವ ಮತ್ತು ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾನಿದೇ 15 ಮತ್ತು 16 ರರಂದು ಏರ್ಪಡಿಸಲಾಗಿದ್ದ **'ಸುಸ್ಥಿರ ಕೃಷಿಯ ಮುಂದಿರುವ ಅವಕಾಶಗಳು ಸವಾಲುಗಳು ಹಾಗೂ ತಂತ್ರಗಳ'** ಬಗೆಗಿನ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಭಾಷಣವನ್ನು ಹೈದ್ರಾಬಾದಿನ ಅಂತಾರಾಷ್ಟ್ರೀಯ ಅರೆಶುಷ್ಕ ಬೆಳೆಗಳ ಸಂಶೋಧನಾ ಸಂಸ್ಥೆಯ ವಿಶ್ರಾಂತ ಪ್ರಧಾನ ಉಪ ನಿರ್ದೇಶಕರಾದ ಡಾ. ಸಿ ಎಲ್ ಲಕ್ಷ್ಮೀಪತಿಗೌಡ ರವರು ನೆರವೇರಿಸಿದರು. ಅವರು ತಮ್ಮ ಭಾಷಣದಲ್ಲಿ ಪ್ರಸ್ತುತ ಜಗತ್ತಿನ ಜನಸಂಖ್ಯೆ 700 ಕೋಟಿಯಷ್ಟಿದ್ದು, 2050 ಕ್ಕೆ 925 ಕೋಟಿ ಆಗಬಹುದು. ಆಗ ಈಗ ಉತ್ಪಾದಿಸುತ್ತಿರುವ ಆಹಾರ ಧಾನ್ಯಗಳ ಎರಡು ಪಟ್ಟು ಬೇಕಾಗುತ್ತದೆ. ಮುಂದಿನ 35 ವರ್ಷಗಳಲ್ಲಿ ಜನಸಂಖ್ಯೆ ಶೇ30 ರಷ್ಟು ಹೆಚ್ಚಾದರು ಆಹಾರ ಪದಾರ್ಥಗಳ ಬೇಡಿಕೆ ಶೇ.100 ರಷ್ಟು ಹೆಚ್ಚಾಗಲಿದೆ. ಕಾರಣ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ನೀಡುವುದಷ್ಟೆ ಅಲ್ಲದೇ ಬದಲಾಗುತ್ತಿರುವ ನಗರೀಕರಣಕ್ಕೆ ಮತ್ತು ಔದ್ಯೋಗೀಕರಣಕ್ಕೂ ಕಚ್ಚಾ ವಸ್ತುವಾಗಿ ಆಹಾರ ಧಾನ್ಯಗಳ ಬಳಕೆಯಾಗಲಿವೆ. ಆದುದರಿಂದ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಾಗಲೇ ಬೇಕು. ಗೋದಿ ಉತ್ಪಾದಕತೆ ವಾತವರಣದ ಬದಲಾವಣೆಯಿಂದ ಈಗಿರುವ ತಾಪಮಾನದಲ್ಲಿ ಕೇವಲ ಎರಡು ಡಿಗ್ರಿಯಷ್ಟು ಹೆಚ್ಚಾದರೂ, ಗೋದಿ ಉತ್ಪಾದಕತೆ ಗಂಭೀರವಾಗಿ ಇಳಿಕೆಯಾಗುತ್ತದೆ. ಹೀಗೆ ಆಹಾರ ಧಾನ್ಯ ಹೆಚ್ಚುಮಾಡುವ ಅನಿವಾರ್ಯತೆ ಹಾಗೂ ಉತ್ಪಾದಕತೆ ಕಡಿಮೆಯಾಗುತ್ತಿರುವ ಸಮಯದಲ್ಲಿ ಸುಸ್ಥಿರ ಕೃಷಿ ಸಾಧನೆಗೆ ತಂತ್ರಜ್ಞಾನಗಳ ಬಳಕೆ ಮತ್ತು ರಾಜಕೀಯ ಇಚ್ಛಾಶಕ್ತಿ ಅವಶ್ಯಕವೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ ನಿರಂಜನಮೂರ್ತಿಯವರು ಮಾತನಾಡುತ್ತಾ, ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥಾಪಕರಾದ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜನ್ಮ ಶತಮಾನೋತ್ಸವ ಮತ್ತು ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ಈ ವಿಚಾರ ಸಂಕಿರಣವನ್ನು ಏರ್ಪಡಿಸಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆ. ಸಂಕಿರಣವನ್ನು ಆಯೋಜಿಸಿರುವ ಕಾಲೇಜು ಮತ್ತು ಅರ್ಥಶಾಸ್ತ್ರವಿಭಾಗ ಅಭಿನಂದನೆಗೆ ಅರ್ಹವಾಗಿದೆ. ಇದು ಅರ್ಥಪೂರ್ಣವಾಗಿ ಮುಗಿದಿರುವುದು ಸಂತೋಷದ ಸಂಗತಿಯಾಗಿದೆ ಎಂದು ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಡಾ ಎಂ ಮಹದೇವಪ್ಪ, ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ ಬಿ ವಿ ಸಾಂಬಶಿವಯ್ಯ, ಪ್ರಾಂಶುಪಾಲರಾದ ಪ್ರೊ ಎಂ ಮಹದೇವಪ್ಪ, ಶೈಕ್ಷಣಿಕ ಡೀನ್ ಡಾ ಕೆ ವಿ ಸುರೇಶ ರವರು ಉಪಸ್ಥಿತರಿದ್ದ ಕಾರ್ಯಕ್ರಮದಲ್ಲಿ, ಶ್ರೀ ವಿರೂಪಾಕ್ಷ ಪಂಡಿತಾರಾಧ್ಯಸ್ವಾಮಿ ಯವರು ಪ್ರಾರ್ಥಿಸಿದರು. ವಿಚಾರ ಸಂಕಿರಣದ ಸಂಘಟನಾ ಕಾರ್ಯದರ್ಶಿಗಳಾದ ಪ್ರೊ ಡಿ ಎಸ್ ಸದಾಶಿವಮೂರ್ತಿ ಯವರು ಸ್ವಾಗತಿಸಿದರು. ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಅರುಣ್ ಬಾಳಮಟ್ಟಿ ಯವರು ವಿಚಾರ ಸಂಕಿರಣದ ವರದಿ ಮಂಡಿಸಿದರು. ಸಂಚಾಲಕರಾದ ಪ್ರೊ ಸಿ ರಮೇಶ್ ರವರು ವಂದಿಸಿದರು. ಪ್ರೊ ಪಿ ಎಂ ಮಹದೇವಸ್ವಾಮಿಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚಿನ ಪ್ರಾಧ್ಯಾಪಕರು, ಸಂಶೋಧಕರು, ರೈತರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರಾಂಶುಪಾಲರು

(ಪ್ರೊ ಎಂ ಮಹದೇವಪ್ಪ)

ಪ್ರಾಚಾರ್ಯರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-25

ಗೆ

ಸಂಪಾದಕರು

\---------------

\---------------

ಮೈಸೂರು